ದಿನಾಂಕ ಃ 21-07-2017 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಶ್ರೀ ಪಿಎಸ್‌ಸಿ ವಕೀಲರಿಂದ ಃ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ನಿಜ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿ ನನ್ನ ಸಹಿ ಇರುತ್ತದೆ.

ಪಾಟೀ ಸವಾಲು ಃ ಶ್ರೀ ಎಮ್‌ಎಚ್‌ಕೆ ವಕೀಲರಿಂದ ಃ

ನಮ್ಮ ತಂದೆಗೆ ಗೋಪೆಪ್ಪ ಮತ್ತು ಗೋಪಣ್ಣ ಎಂದು ಎರಡು ಹೆಸರುಗಳಿಂದ ಕರೆಯುತ್ತಾರೆ ಅಂದರೆ ಸುಳ್ಳು. ನಮ್ಮ ತಂದೆಗೆ ಗೋಪೆಪ್ಪ ಎಂದು ಮಾತ್ರ ಕರೆಯುತ್ತಾರೆ. ಗೋಪೆಪ್ಪನ ತಂದೆಯ ಹೆಸರು ಅಂದರೆ ನನ್ನ ಅಜ್ಜನ ಹೆಸರು ಸೋಮಪ್ಪ ಇರುತ್ತದೆ. ಸೋಮಪ್ಪನಿಗೆ 4 ಜನ ಸಹೋದರರು ಇರುತ್ತಾರೆ. ಸೋಮಪ್ಪನ ಸಹೋದರರ ಹೆಸರುಗಳು ನನಗೆ ಹೇಳಲು ಆಗುವುದಿಲ್ಲ. ಸದರಿ ಸೋಮಪ್ಪನ ಸಹೋದರರ ಹೆಸರುಗಳು 1. ಬಾಬಣ್ಣ 2. ಗೇಮಪ್ಪ ಮತ್ತು 3. ಪೀರಪ್ಪ ಅಂದರೆ ಸರಿ. ಪೀರಪ್ಪನ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಪೀರಪ್ಪನಿಗೆ 3 ಜನ ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ಪೀರಪ್ಪನ ಮಕ್ಕಳ ಹೆಸರುಗಳು 1. ಚಿಕ್ಕಪ್ಪ 2. ದೇವಪ್ಪ 3. ಈರಪ್ಪ ಮತ್ತು 4. ಗಿರಿಜವ್ವ ಎಂದು ಇರುತ್ತವೆ. ಸರ್ವೇ ನಂ 137/2 ನೇದ್ದರ 7 ಎಕರೆ 36 ಗುಂಟೆ ಜಮೀನು ಹನುಮಂತ, ಸುಬ್ಬಪ್ಪ, ಈರಪ್ಪ, ದೇಮಪ್ಪ ಹೆಸರುಗಳಲ್ಲಿ ಇರುತ್ತದೆ. ಅದೇ ರೀತಿ 130/11 ನೇದ್ದರ 1 ಎಕರೆ 23 ಗುಂಟೆ ಜಮೀನು ದೇಮಪ್ಪ ಇವರ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನುಗಳು ನಾನು ಹೇಳಿದ ಹೆಸರಿನ ವ್ಯಕ್ತಿಗಳ ಹೆಸರಿನಲ್ಲಿ ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಓದಲು ಬರುವುದಿಲ್ಲ.

ಈ ಹಂತದಲ್ಲಿ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ. ನ್ಯಾಯಾಲಯ, ಬ್ಯಾಡಗಿ.